ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 77/2018

ಸಿ ಡಬ್ಲ್ಯೂ-6

ಪಿ ಡಬ್ಲ್ಯೂ-3

ದಿಃ 06-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಉಮೇಶ ನಾಯ್ಕ

ತಂದೆಯ ಹೆಸರುಃ ಗೋವಿಂದ ನಾಯ್ಕ

ವಯಸ್ಸುಃ 43 ವರ್ಷ

ಉದ್ಯೋಗಃ ಹೊಟೇಲಿನಲ್ಲಿ ಕೆಲಸ

ವಿಳಾಸಃ ಹೆಗ್ಗಾರ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಈ ಪ್ರಕರಣದ ಮಾಹಿತಿ ಇರುವುದಿಲ್ಲ. ನನಗೆ ಪೊಲೀಸರು ಸಾಕ್ಷಿ ನುಡಿಯಲು ಸಮನ್ಸ ಕೊಟ್ಟಿದ್ದರಿಂದ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಯಾವ ಪ್ರಕರಣಕ್ಕಾಗಿ ಸಾಕ್ಷಿಯಾಗಿ ಬಂದಿರುತ್ತೇನೆ ಎಂದು ಗೊತ್ತಿರವುದಿಲ್ಲ. ನಾನು ಯಾವುದೇ ಅಪಘಾತದ ವಿಷಯಕ್ಕಾಗಿ ಸಹಿಯನ್ನು ಹಾಕಿರುವುದಿಲ್ಲ. ಆರೋಪಿಯು ಗೈರು ಹಾಜರು ಇದ್ದು, ಸಾಕ್ಷಿಯು ಅವರನ್ನು ನೋಡಿದರೆ ಗುರುತಿಸುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ನೇರವಾಗಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ದಿಃ 28-10-2017 ರಂದು ಮಧ್ಯಾಹ್ನ 4.45 ಗಂಟೆಗೆ ನೀವು ನಿಮ್ಮ ಊರಿನ ಬಸ್ ನಿಲ್ದಾಣದ ಎದುರಿಗೆ ನಿಂತುಕೊಂಡಿದ್ದೀರಿ ಎಂದರೆ ಸರಿಯಲ್ಲ. ಆ ಬಸ್ ನಿಲ್ದಾಣದ ಎದುರಿಗೆ ಅಂಕೋಲಾ ಕಡೆಯಿಂದ ಯಲ್ಲಾಪುರ ಕಡೆಗೆ ಒಂದು ಲಾರಿ ನಂ. ಕೆ ಎ ಎಲ್ 05/ಎ ಎಂ.8298 ನೆದ್ದನ್ನು ಆರೋಪಿಯು ಅತೀವೇಗದಿಂದ ಚಲಾಯಿಸಿಕೊಂಡು ಯಲ್ಲಾಪುರ ಕಡೆಯಿಂದ ಅಂಕೋಲಾ ಕಡೆಗೆ ಬರುತ್ತಿದ್ದ ಮೋಟರ್ ಸೈಕಲ್ ನಂ. ಕೆ ಎ 31/ ಡಬ್ಲ್ಯೂ 8074 ನೆದ್ದಕ್ಕೆ ಅಪಘಾತಪಡಿಸಿ ಲಾರಿಯ ಎಡಬದಿಯ ಅಡಿಗೆ ಸಿಲುಕಿವು ಸ್ವಲ್ಪ ದೂರಕ್ಕೆ ಎಳೆದುಕೊಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನೀವು ಕೂಡಲೇ ಹತ್ತಿರ ಹೋಗಿ ಮೋಟರ್ ಸೈಕಲ್ ಸವಾರನಿಗೆ ನೋಡಿದಾಗ ಆತನ ತಲೆಗೆ ಮತ್ತು ಕೈಕಾಲುಗಳಿಗೆ ಗಂಭೀರ ಸ್ವರೂಪದ ಗಾಯವಾಗಿ ಮೃತಪಟ್ಟಿದ್ದನು ಎಂದರೆ ಸರಿಯಲ್ಲ. ನೀವು ಲಾರಿ ಚಾಲಕನನ್ನು ನೋಡಿ ಆತನ ಹೆಸರನ್ನು ಸ್ಥಳದಲ್ಲಿಯೇ ತಿಳಿಸಿದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಮೋಟರ್ ಸೈಕಲ್ ನ ಸವಾರನ ಹೆಸರನ್ನೂ ಸಹ ತಿಳಿದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಈ ಸಂಪೂರ್ಣ ಮಾಹಿತಿ ಇದ್ದು, ನೀವು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-10 ಎಂದು ಗುರುತಿಸಲಾಯಿತು. ನಿಮಗೆ ಈ ಪ್ರಕರಣದ ಸಂಪೂರ್ಣ ಮಾಹಿತಿ ಇದ್ದರೂ ಸಹ, ಅದಕ್ಕೆ ಸಂಬಂಧಪಟ್ಟು ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಸಹ

ಆರೋಪಿಯನ್ನು ಅದೇ ದಿನ ಗುರುತಿಸಿದರೂ ಸಹ, ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.